ಹೇಳಿದಂತೆ ಡಾ. ಅನಂತಮೂರ್ತಿಯವರು ಸಾಹಿತ್ಯ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಹೊಸ ಹೊಸ ಆಲೋಚನೆಗಳಿಗೆ ಆಯಾಮಗಳನ್ನು ನಿರ್ಮಾಣ ಮಾಡಿರತಕ್ಕ ಒಬ್ಬ ವಿಚಾರವಂತ ಲೇಖಕ ಮತ್ತು ಚಿಂತನ ಕಾರ. ಅದರಲ್ಲಿಯೂ ಕನ್ನಡ ನುಡಿಗೆ ಆತ್ಮಾಭಿಮಾನದ ಕವಚವನ್ನು ಕೂಡ ಅವರು ತೊಡಿಸಲು ತಮ್ಮ ಕೈಯಲ್ಲಾದ ಪ್ರಯತ್ನ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಆಯ್ಕೆಯಾಗಿರತಕ್ಕದ್ದು ನಮ್ಮ ಕನ್ನಡ ನಾಡಿಗೆ ಸಂದ ಭಾಗ್ಯ. ಈ ಸದನದ ಎಲ್ಲರ ಪರವಾಗಿ ನಾವು ಡಾ. ಯು.ಆರ್. ಅನಂತಮೂರ್ತಿಯವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

೩. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಬದಲು ಬೇರೆ ವಿಷಯವನ್ನು ಪ್ರಸ್ತಾಪಿಸಿರುವುದರಿಂದ ಕಾಲಾವಕಾಶಕ್ಕೆ ತೊಂದರೆ.

ಶ್ರೀ ಹೆಚ್. ವಿಶ್ವನಾಥಯ್ಯ:- ಸನ್ಮಾನ್ಯ ಅಧ್ಯಕ್ಷಣಿಯರೆ, ಈಗ ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈ ದಿವಸ ನಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಮುಂದುವರಿಸುತ್ತಿದ್ದೇವೆ. ತಮಗೆಲ್ಲಾ ಗೊತ್ತಿರುವ ಹಾಗೆ, ಸಂವಿಧಾನದ ೧೭೬ನೇ ಪರಿಚ್ಛೇದ ವಿಧಿಯ ಅನ್ವಯ ರಾಜ್ಯಪಾಲರು ಈ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಆ ಭಾಷಣದ ಮೇಲಿನ ಚರ್ಚೆಗೋಸ್ಕರ ಈಗಾಗಲೆ ಸಮಯವನ್ನು ನಿಗದಿ ಮಾಡಿದ್ದಾರೆ. ಆ ರೀತಿ ನಿಗದಿ ಮಾಡಿದಂಥ ದಿನಗಳಲ್ಲಿ ಯಾವ ಸ್ವರೂಪದ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಾವು ಈಗಾಗಲೇ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಮತ್ತು ಕೌಲ್ ಅಂಡ್ ಶಕದರ್ ಅವರ ಪುಸ್ತಕದಲ್ಲೂ ಸಹ ಈ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರುವಂತೆ ಮತ್ತು ನಮ್ಮ ನಿಯಮಗಳ ಅಡಿಯಲ್ಲಿ ನಾವು ಔಪಚಾರಿಕ ಸ್ವರೂಪದ ಕಾರ್ಯಕಲಾಪಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಕಾರ್ಯಕಲಾಪಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸಂವಿಧಾನದ ೧೭೬ನೇ ವಿಧಿಯನ್ವಯ ಏನು ವರ್ಷದ ಪ್ರಥಮ ಅಧಿವೇಶನವನ್ನು ಮಾನ್ಯ ರಾಜ್ಯಪಾಲರು ಉದ್ದೇಶಿಸಿ ಭಾಷಣ ಮಾಡುತ್ತಾರೆ ಆ ಭಾಷಣದ ಮೇಲೆ ಚರ್ಚೆ ಮಾಡಲಿಕ್ಕೆ ನಿಯಮಗಳನ್ನು ರೂಪಿಸಿಕೊಳ್ಳಲಿಕ್ಕೆ ಅವಕಾಶ ಇದೆ. "Provision shall be made by the rules regulating the procedure of the house or either of the houses for allotment time for discussion of the matters referred to in such address." ಈ ವಿಧಿಯನ್ವಯ ಕರ್ನಾಟಕ ರಾಜ್ಯದ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ವಯ ನಾವು ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ನಿಯಮದ ಪ್ರಕಾರ ೫೫ನೇ ಪರಿಚ್ಛೇದದಲ್ಲಿ ಹೇಳಿರುವ ರೀತಿಯಲ್ಲಿ ನಿಯಮ ೨೨, ೨೦ ಅನ್ನು ಓದುತ್ತೇನೆ. ಮೊದಲು ೨೦ ಓದುತ್ತೇನೆ. " On such day or days or part of any day, the House shall be at liberty to duscuss the matters referred to in such Address on a motion of Thanks moved by a Member and seconded by another Member.

Rule 22: Notwithstanding that, a day has been allotted for discussion on the Governor's Address."

ಯಾವ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಾವು ನಿಯಮ ೨೨ ಅನ್ನು ರೂಪಿಸಿಕೊಂಡಿದ್ದೇವೆ. ಆ ನಿಯಮದನ್ವಯ ನಾವು ಯಾವುದಾದರೂ ಒಂದು ವಿಧೇಯಕ ಅಥವಾ ವಿಧೇಯಕಗಳನ್ನು ಮಂಡಿಸಲು ಮಾತ್ರ ಅವಕಾಶ ಇದೆ. ಮತ್ತು ಜರೂರುಮಹತ್ವದ ವಿಷಯಗಳ ಬಗ್ಗೆ ನಿಲುವಳಿ ಸೂಚನೆಗೆ ಅನುಮತಿ ದೊರೆತರೆ ಅವುಗಳನ್ನು ಪ್ರಸ್ತಾಪ ಮಾಡಲಿಕ್ಕೆ

ಅವಕಾಶ ಇದೆ. ಅದನ್ನು ಹೊರತುಪಡಿಸಿ ಅಂದರೆ ಔಪಚಾರಿಕ ಸ್ವರೂಪದ ನೋಟಿಫಿಕೇಷನ್ ಇಡುವುದಾಗಲೀ, ಹೇಳಿಕೆ ಮಾಡುವುದಾಗಲೀ ಅಂಥವನ್ನು ಹೊರತುಪಡಿಸಿ ಬೇರೆ ಯಾವುದೇ ವಿಧವಾದ ಕಾರ್ಯಕಲಾಪಗಳನ್ನು ಈ ಭಾಷಣದ ಮಧ್ಯೆ ಅಂದರೆ ನಾವೇನು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಅದರ ಮಧ್ಯೆ ತೆಗೆದುಕೊಳ್ಳಲಿಕ್ಕೆ ಅವಕಾಶ ಇಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಗಮನ ಸೆಳೆಯುವ ಸೂಚನೆಗಳಾಗಲೀ, ಬೇರೆ ಯಾವುದೇ ವಿಧವಾದ ಕಾರ್ಯಕಲಾಪಗಳು ಇದ್ದರೂ ಔಪಚಾರಿಕ ಸ್ವರೂಪವಲ್ಲದ ಕಾರ್ಯಕ್ರಮಗಳು ಏನು ಇವೆ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ನಿಯಮಗಳು ವಿರುದ್ಧ ಇದೆ. ಆದ್ದರಿಂದ ಅವುಗಳನ್ನು ತೆಗೆದುಕೊಳ್ಳಬಾರದೆಂದೂ ಮತ್ತು ಇದರ ಬಗ್ಗೆ ತಮ್ಮ ಆದೇಶವನ್ನು ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ನಾವೇ ಮಾಡಿಕೊಂಡಿರುವಂತಹ ಒಂದು ಕಾನೂನಿನ ಚೌಕಟ್ಟಿನಲ್ಲಿ ಇದುವರೆಗೆ ಅನೇಕ ವಿಷಯಗಳು ನಮ್ಮ ರೂಢಿಯಲ್ಲಿ ಬಂದಿರುವಂಥಾದ್ದು ಇವೆ. ತಮಗೆ ಗೊತ್ತಿರುವ ಹಾಗೆ, ರಾಜ್ಯಪಾಲರ ಭಾಷಣವನ್ನು ಹತ್ತಾರು ವರ್ಷಗಳ ದಾಖಲೆಗಳನ್ನು ತೆಗೆದು ನೋಡಿದರೆ ತಿಳಿಯುತ್ತದೆ. ನಮಗೆ ಗೊತ್ತಿರುವ ಹಾಗೆ, ಅನೇಕ ಪ್ರಮುಖ ವಿಷಯಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಮುಂದೆ ಗಂಭೀರವಾಗಿ.....

ಶ್ರೀ. ಹೆಚ್. ವಿಶ್ವನಾಥಯ್ಯ:- ಶೂನ್ಯ ವೇಳೆ ಅಥವಾ ಪ್ರಶ್ನೋತ್ತರಕ್ಕೆ ನಾನು ಈ ಮಾತನ್ನು ಹೇಳಿಲ್ಲ ಅಥವಾ ಜರೂರು ಮಹತ್ವದ ವಿಷಯಗಳ ಬಗ್ಗೆ ಅಡ್‌ಜರ್ನ್‌ಮೆಂಟ್ ಮೋಷನ್ ಕಳಿಸಿದ್ದರೆ ಅದಕ್ಕೆ ಅವಕಾಶ ಇದೆ. ಆದರೆ ಬೇರೆ ಕಾರ್ಯಕಲಾಪಗಳನ್ನು, ಔಪಚಾರಿಕ ಸ್ವರೂಪವಲ್ಲದ ಬೇರೆ ಕಾರ್ಯಕಲಾಪಗಳನ್ನು ಈ ಮಧ್ಯೆ ತೆಗೆದುಕೊಳ್ಳುವುದಕ್ಕೆ ನಾವು ನಿಯಮಗಳನ್ವಯ ನಿಷೇಧ ಮಾಡಿಕೊಂಡಿದ್ದೇವೆ. ಆದ್ದರಿಂದ ಇದನ್ನು ತೆಗೆದುಕೊಳ್ಳಬಾರದೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ವಿಶ್ವನಾಥಯ್ಯನವರು ಏನು ಹೇಳುತ್ತಿದ್ದಾರೆ ಈ ಮಾತಿಗೆ ನನ್ನ ಸಂಪೂರ್ಣ ಸಹಮತ ಇದೆ. ಮತ್ತೆ ನಾವೆಲ್ಲರು ಆ ಒಂದು ಕಾನೂನು ಚೌಕಟ್ಟಿನಲ್ಲಿ ಆ ನಿಯಮಾವಳಿಯನ್ನು ಪಾಲನೆ ಮಾಡಲೇಬೇಕು. ಇದರ ಬಗ್ಗೆ ನನ್ನದು ಪ್ರಶ್ನೆ ಇಲ್ಲ. ಕಳೆದ ೧೦ ವರ್ಷಗಳ ರಾಜ್ಯಪಾಲರ ಭಾಷಣದಮೇಲಿನ ಚರ್ಚೆಯ ಸಂದರ್ಭಗಳನ್ನು ತೆಗೆದುಕೊಂಡಾಗ ಕಾಲಿಂಗ್ ಅಟೆನ್‌ಷನ್ ಮುಂತಾದ ಅತ್ಯಂತ ಪ್ರಮುಖವಾದ ವಿಷಯಗಳಿಗೆ ಅವಕಾಶ ಸಿಕ್ಕಿಕೊಂಡೇ ಬಂದಿದೆ. ತಾವು ಬೇಕಾದರ ತೆಗೆದು ನೋಡಿ. ಆದುದರಿಂದ ಇನ್ನು ಮುಂದೆ ಇದನ್ನು ಬೇಕಾದರೆ ಕಟ್ಟು ನಿಟ್ಟಾಗಿ ಪಾಲನೆ ಮಾಡಬೇಕು ಎನ್ನುವುದಾದರೆ ಅದರ ಬಗ್ಗೆ ಯಾರದೂ ಅಭ್ಯಂತರ ಇಲ್ಲ. ಆದರೆ ಈ ಸಂದರ್ಭದಲ್ಲಿ ಕಾಲಿಂಗ್ ಅಟೆನ್‌ಷನ್ ಬಂದಿದೆ. ಅದು ಅಪರೂಪಕ್ಕೆ ನಮಗೆ ಒಂದು ಸಿಕ್ಕಿದೆ ಅದಕ್ಕೆ ಅಡ್ಡಿಯಾಗಬಾರದೆಂದು ನಮ್ಮ ಕಳಕಳಿ ಅಷ್ಟೆ. ನಿಯಮಗಳನ್ನು ನಾವು ಪಾಲನೆ ಮಾಡಲೇಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ಈಗ ಮಾನ್ಯ ವಿಶ್ವನಾಥಯ್ಯನವರು ಏನು ಪಾಯಿಂಟ್ ರೈಸ್ ಮಾಡಿದ್ದಾರೆ. The rule is very clear. ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ಅಪ್ಪಿತಪ್ಪಿ ನಮ್ಮದು ಬಂದಿಲ್ಲ. ದಿನಾ ನಿಮ್ಮದು ಇರುತ್ತದೆ. ಇಲ್ಲದಿದ್ದರೆ ನೀವು ಬಿಡುವುದಿಲ್ಲ. ಹಾಗಾಗಿ ಇವತ್ತು ಇದರ ಬಗ್ಗೆ ನಿರ್ಣಯವಾಗಬೇಕಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಸಾಕಷ್ಟು ಅನುಭವ ಇದೆ. ಅವರು ತಮ್ಮ ಅಭಿಪ್ರಾಯ ನೀಡಬೇಕಾಗುತ್ತದೆ. ರೂಲ್ ೨೨ ಸ್ಪಷ್ಟವಾಗಿದೆ. ವಿಕೆಂದರ ಬಿಲ್ ಇಂಟ್ರಡ್ಯೂಸ್ ಮಾಡಿದರೂ ಡಿಸ್ಕಷನ್‌ಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. Other business of formal character. Formal character ಎಂದರೆ ಯಾವ ಬಿಸಿನೆಸ್ ಎಂದು ಅದರ ಬಗ್ಗೆ ಕೂಡ ಒಂದು

ನಿರ್ಣಯವಾಗಬೇಕಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಒಂದು ನಿರ್ಣಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಕಾನೂನು ಬಲವನ್ನು ತೆಗೆದುಕೊಂಡು ಬಿ.ಜೆ.ಪಿ. ಮೇಲೆ ನೀವು ಧಾಳಿ ಮಾಡುತ್ತೀರೇನೋ ಎಂದು ನಮಗೆ ಆನ್ನಿಸುತ್ತದೆ.

ಶ್ರೀ. ಕೆ.ಎಸ್. ಈಶ್ವರಪ್ಪ :- ಅರೆಕಾಲಿಕ ಶಿಕ್ಷಕರ ಮೇಲೆ ಈ ಧಾಳಿ.

ಶ್ರೀ ಹೆಚ್. ವಿಕಾಂತಯ್ಯ :- ಮಾನ್ಯ ಅಧ್ಯಕ್ಷರ ಗಮನಕ್ಕೆ ಎರಡು ವಾಕ್ಯಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ.

Page .190
" Discussion on the Address is generally not interrupted during the course of the sitting of the House by any other business. The only business of a formal character can be transacted on these days before the House commences or continues its discussion on the address."

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಿಕಾಂತಯ್ಯನವರು ಏನು ಈ ಸದನದ ಗಮನವನ್ನು ಸೆಳೆದಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಸಹಮತ ಇದೆ. ಸದನದ ಕಾರ್ಯಕಲಾಪಗಳನ್ನು ಸಂಯೋಜನೆ ಮಾಡತಕ್ಕದ್ದು ಮಾನ್ಯ ಅಧ್ಯಕ್ಷರ ಪರಮಾಧಿಕಾರ. ಕಾಲಿಂಗ್ ಅಟೆನ್‌ಷನ್ ಆಗಲಿ, ಬೇರೆ ವಿಷಯವಾಗಲಿ ಬೇರೆ ಯಾವುದೇ ಆದರೂ ಮಾನ್ಯ ಅಧ್ಯಕ್ಷರ ಅಪ್ಪಣೆ ಇಲ್ಲದೆ ಯಾವುದೂ ಸಭೆಯ ಮುಂದೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಸಭಾಧ್ಯಕ್ಷರು ಏನು ತೀರ್ಪನ್ನು ಕೊಡುತ್ತಾರೋ ಆ ತೀರ್ಪಿಗೆ ಈ ಸರ್ಕಾರ ಬದ್ಧವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಇದು ಸಭೆಯ ಕಾರ್ಯಕಲಾಪ ಪಟ್ಟಿಯಲ್ಲಿ ಸೇರಿದೆ. ಅರೆಕಾಲಿಕ ಶಿಕ್ಷಕರದ್ದು ಬಹಳ ಗಂಭೀರವಾದ ಪ್ರಶ್ನೆ. ಆವರಮೇಲೆ ಈ ಕಾನೂನಿನ ಒಂದು ಪ್ರಯೋಗವಾಗಬಾರದು. ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟು ಸೇರಿಸಿರುವುದರಿಂದ ದಯವಿಟ್ಟು ಇನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇದರ ಬಗ್ಗೆ ಮಾನ್ಯ ಅಧ್ಯಕ್ಷರು ಗಮನಹರಿಸಿ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಆ ಅರೆಕಾಲಿಕ ಶಿಕ್ಷಕರಿಗೆ ಅನುಕೂಲವಾಗುತ್ತದೆ. ನಮ್ಮ ವಿಧಿವಿಧಾನಗಳನ್ನು ಗಾಳಿಗೆ ತೂರಲು ನಾವು ಯಾರೂ ಸಿದ್ಧವಾಗಿಲ್ಲ. ಆರೀತಿ ಮಾಡುವುದಕ್ಕೆ ಹೋದರೆ ಆ ಶಿಕ್ಷಕರಿಗೆ ಅನ್ಯಾಯವಾಗಿ ತೊಂದರೆಯಾಗುತ್ತದೆ. ಆದ್ದರಿಂದ ತಮ್ಮ ತೀರ್ಪಿನಲ್ಲಿ ಇದಕ್ಕೆ ಸ್ವಲ್ಪಮಟ್ಟಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ:- ಮಾನ್ಯ ಉಪ ಮುಖ್ಯ ಮಂತ್ರಿಗಳು ಹೇಳಿರುವುದರ ಜೊತೆಗೆ ನಾನೂ ಕೂಡ ಒಂದೆರಡು ಮಾತುಗಳನ್ನು ಸೇರಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿಕಾಂತಯ್ಯನವರು ಈ ಸೂಚನೆಯನ್ನು ತಂದಿರುವುದಕ್ಕೆ ನಾನೂ ಬೆಂಬಲವನ್ನು ಕೊಡುತ್ತೇನೆ. ನಿನ್ನೆ ನಾನು ನಿಯಮಗಳ ಪ್ರಕಾರ ಹೋಗಬೇಕೆಂದು ಕೆಲವು ವಿಷಯಗಳನ್ನು ಹೇಳಿದೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರ ಪಕ್ಷಗಳ ನಾಯಕರು ನಿಯಮಗಳೇನೋ ಇರುತ್ತವೆ, ಆ ನಿಯಮಗಳನ್ನೇ ಹಿಡಿದುಕೊಂಡು ಹೋಗಬೇಡಿ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಜೋರಾಗಿ ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ತಾವು ಕಡತ ತೆಗೆದು ನೋಡಬೇಕು. ಮಾರಿ ಕಣ್ಣು ಹೋತನಮೇಲೆ ಎಂದು ಒಂದು ಗಾದೆ ಇದೆ. ಅರೀತಿ ಆಗಬಾರದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ನಿಮಗೆ ಬೇಕಾದಾಗ ನಿಯಮ ಬೇಕು, ಬೇಡವಾದಾಗ ನಿಯಮ ಬೇಡ ಎನ್ನತಕ್ಕ ಪದ್ಧತಿ ಬೇಡ.

ಶ್ರೀ ವಾಟಾಳ್ ನಾಗರಾಜ್:- ನಾವು ಯಾವತ್ತೂ ನಿಯಮಗಳನ್ನು ಗಾಳಿಗೆ ತೂರಬೇಕೆಂದು ಇಲ್ಲ. ಅನೇಕ ಪ್ರಸಂಗಗಳಲ್ಲಿ ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡಿತಕ್ಕಂಥದ್ದು ಸಂಪ್ರದಾಯವಿದೆ. ನಾವು ಅನೇಕ ಸಾರಿ ತಮ್ಮ ಕೊಠಡಿಗೆ ಬಂದಿದ್ದೇವೆ, ತಮ್ಮನ್ನು ಕೇಳಿದ್ದೇವೆ. ಇಂಥಾದ್ದನ್ನು ನಾನು ಪ್ರಸ್ತಾಪ ಮಾಡುತ್ತೇವೆಂದು ಕೇಳಿದ್ದೇವೆ. ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಆ ರೀತಿ ತಾವು ಅನುಮತಿ ಕೊಟ್ಟಮೇಲೆ ಇಲ್ಲಿ ನಾನು ವಿಧಿ ವಿಧಾನಗಳನ್ನು ಗಾಳಿಗೆ ತೂರುವ ಪ್ರಶ್ನೆಯೇ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅನುಮತಿಯನ್ನು ಕೊಟ್ಟಮೇಲೆ ನಾವು ಏನನ್ನೂ ಹೇಳುವುದಿಲ್ಲ. ಅನುಮತಿಯನ್ನು ಕೊಟ್ಟಮೇಲೆ ನಾವು ಅದಕ್ಕೆ ಬದ್ದರಾಗುತ್ತೇವೆ. ಅನುಮತಿಗನುಸಾರವಾಗಿ ನಾವೂ, ನೀವೂ ನಡೆದುಕೊಳ್ಳಬೇಕಾಗುತ್ತದೆ. ಆದರೆ ನಿಯಮವನ್ನು ತಿಳಿದುಕೊಂಡು ನಾವೂ ನೀವೂ ನಡೆದುಕೊಳ್ಳೋಣವೆಂದು ನಮ್ರವಾಗಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ನಿಯಮವನ್ನು ಯಾವಾಗ ಬೇಕಾದರೂ ಸಡಿಲ ಮಾಡುವುದು, ಯಾವಾಗ ಬೇಕಾದರೂ ಡಿಫ್ಯೂಸ ಮಾಡತಕ್ಕದ್ದು ಬೇಡ. ಅಧ್ಯಕ್ಷರು ಅನುಮತಿಯನ್ನು ಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ ಕೆಲವು ಸಂದರ್ಭದಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಎಂದು ತಾವು ಹೇಳುತ್ತೀರಿ. ಆದ್ದರಿಂದ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಏತಕ್ಕೆ ಹೇಳುತ್ತೀರಿ. ನಾನು ೧೯೬೭ನೇ ಇಸವಿಯಿಂದಲೂ ಈ ಸದನದಲ್ಲಿದ್ದೇನೆ.

ಛೇರ್ಮನ್:- ಈಗ ವಿಷಯಗಳನ್ನೆಲ್ಲಾ ಪ್ರತಿಪಾದನೆ ಮಾಡಿದ್ದಾಯಿತು. ಮಾನ್ಯ ಉಪ ಮುಖ್ಯ ಮಂತ್ರಿಗಳೂ ಹೇಳಿದರು. ಮಾನ್ಯ ಕಾನೂನು ಮಂತ್ರಿಗಳೂ ಹೇಳಿದ್ದಾರೆ. ವಿಷಯವೆಲ್ಲಾ ಗೊತ್ತಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗಾಗಲೇ ತಾವೇ ಅನುಮತಿಯನ್ನು ಕೊಟ್ಟು ಅದು ಅಜೆಂಡಾದಲ್ಲಿ ಬಂದಿರತಕ್ಕ ವಿಷಯವಾದ್ದರಿಂದ ಇದಕ್ಕೆ ದಯಮಾಡಿ ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಈಗ ಈ ಆದೇಶವನ್ನು ತಡೆಹಿಡಿದು ರೂಲಿಂಗ್‌ನ್ನು ಕಾದಿರಿಸಲಾಗಿದೆ.

Sri B.S.YEDUYURAPPA:- Thankyou Sir,

ಛೇರ್ಮನ್:- ಈಗ ಗಮನ ಸೆಳೆಯುವ ಸೂಚನೆಗಳು.

<u>ಗಮನ ಸೆಳೆಯುವ ಸೂಚನೆಗಳು</u>

೧) ವಿಷಯ:- ಅರೆಕಾಲಿಕ ಪ್ರೌಢಶಾಲೆ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ.

೧೧.೩೦ ಎ.ಎಂ

* ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಾಳೆ ದಿವಸ ಮಹಾ ಶಿವರಾತ್ರಿ. ಆದರೆ ಈ ಅರೆಕಾಲಿಕೆ ಶಿಕ್ಷಕರಿಗೆ ವರ್ಷವಿಡೀ ಮಹಾಶಿವರಾತ್ರಿಯಾಗುತ್ತಿದೆ. ವರ್ಷವಿಡೀ